**ಸಾಕ್ಷಿ ಯನ್ನು ದಿನಾಂಕ: 21-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು :- 11 ನೇ ಪ್ರತಿವಾದಿ ಪರ ವಕೀಲರಿಂದಃ**

ದಾವಾ ಸ್ವತ್ತನ್ನು ಮೂಲತಃ ನಮ್ಮ ತಂದೆ ಮುನಿತಿಮ್ಮರಾಯಪ್ಪನ ತಮ್ಮನ ಹೆಂಡತಿ ಮತ್ತು ಮಕ್ಕಳಿಂದ ಖರೀದಿಸಿದ ಸ್ವತ್ತು ಎಂದರೆ ಸರಿ. ಮುನಿತಿಮ್ಮರಾಯಪ್ಪರವರ ಮಗಳು ಹೇಮಕ್ಕ ರವರಿಂದ ಖರೀದಿಸಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಗೆ ಇಬ್ಬರು ಪತ್ನಿಯರಿದ್ದು, ಮೊದಲನೆಯವರು ನಂಜಮ್ಮ ರವರು ಮರಣ ಹೊಂದಿದ ನಂತರ ಎರಡನೇ ಪತ್ನಿ ಲಕ್ಷ್ಮಮ್ಮರವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ನಮ್ಮ ತಂದೆಗೆ ನಂಜಮ್ಮರವರಿಂದ ಒಟ್ಟು 7 ಜನ ಮಕ್ಕಳು. ಮೂರು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಗಂಡು ಮಕ್ಕಳು ಎಂದರೆ ಸರಿ. ಲಕ್ಷ್ಮಮ್ಮರವರಿಗೆ ಒಬ್ಬರೇ ಮಗ ನಂಜೇಗೌಡ ಎಂದರೆ ಸರಿ. ನಮ್ಮ ತಂದೆ ಮುನೇಗೌಡ ರವರು ಮರಣ ಹೊಂದಿದ ನಂತರ ಅವರ ಎಲ್ಲಾ ಮಕ್ಕಳಿಗೆ ಆಸ್ತಿಗಳಲ್ಲಿ ಸಮಾನ ಹಕ್ಕು ಇತ್ತು ಎಂದರೆ ಸರಿ. ಅಸಲು ದಾವಾ ನಂ.37/2000 ನ್ನು ಹೇಮಕ್ಕರವರು ದಾಖಲಿಸಿರುತ್ತಾರೆ ಎಂದರೆ ಸರಿ. ನಿಡಿ-4 ಮತ್ತು 5 ಸದರಿ ದಾವೆಯ ದಾಖಲೆಗಳಾಗಿರುತ್ತವೆ ಎಂದರೆ ಸರಿ. ಸದರಿ ದಾವೆ ನಡೆಯುತ್ತಿದ್ದಾಗ ನಮ್ಮ ಮತ್ತು ಹೇಮಕ್ಕರವರ ಮಧ್ಯೆ ಮಾತುಕತೆಯಾಗಿ ದಿನಾಂಕಃ 13-06-2005 ರಂದು ನಾವು 10 ನೇ ಪ್ರತಿವಾದಿಗೆ ನಿಡಿ-7 ರಂತೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಒಟ್ಟು ರೂ.18 ಲಕ್ಷಗಳಿಗೆ ವ್ಯಾಪಾರ ಆಗಿದ್ದು, ಅದರಲ್ಲಿ 12 ಲಕ್ಷಗಳನ್ನು ಹೇಮಕ್ಕರವರಿಗೆ ನೀಡಬೇಕು ಹಾಗೂ ಬಾಕಿ ರೂ.6 ಲಕ್ಷಗಳನ್ನು ನಮ್ಮ ಕುಟುಂಬಕ್ಕೆ ಸೇರಬೇಕು ಎಂದು ತೀರ್ಮಾನವಾಯಿತು ಎಂದರೆ ಸರಿ. ನಿಡಿ-7 ಕ್ಕೆ ನಾನು, ನಮ್ಮ ಅಣ್ಣ ಹಾಗೂ ಹೇಮಕ್ಕ ಪ್ರತಿ ಪುಟಗಳಿಗೂ ಸಹಿ ಮಾಡಿದ್ದು, ಸದರಿ ಸಹಿಗಳನ್ನು ಗುರುತಿಸುತ್ತಿದ್ದೇನೆ. ಸದರಿ ದಿನಾಂಕದಂದು 10 ನೇ ಪ್ರತಿವಾದಿ ನಮಗೆ ರೂ.3 ಲಕ್ಷ ನಗದು ನೀಡಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವ್ಯವಹಾರವು ಸಾಕ್ಷಿದಾರರಾದ ರಾಮಕ್ಷಷ್ಣಪ್ಪ ಮತ್ತು ವೆಂಕಟೇಶ್ ರವರ ಸಮ್ಮುಖದಲ್ಲಿ ಆಗಿರುತ್ತದೆ ಎಂದರೆ ಸರಿ. ಉಳಿಕೆ ಹಣದಲ್ಲಿ ರೂ.10,50,00/- ಗಳನ್ನು ಅಸಲು ದಾವಾ ನಂ.37/2000 ವನ್ನು ವಾಪಸ್ಸು ಪಡೆದಾಗ ಹಾಗೂ ರೂ.3 ಲಕ್ಷಗಳನ್ನು ನನಗೆ ಜಿ.ಪಿ.ಎ ಮಾಡಿಕೊಟ್ಟ ನಂತರ ಪಾವತಿಸಿರುತ್ತಾರೆ ಎಂದರೆ ಸರಿ. ಹೇಮಕ್ಕರವರಿಗೆ ಸೆಪ್ಟೆಂಬರ್ 2005 ರಲ್ಲಿ ಅಸಲು ದಾವಾ ನಂ.37/2000 ವನ್ನು ವಾಪಸ್ಸು ಪಡೆಯುವ ಬಗ್ಗೆ ರೂ.10,50,000/- ಪಾವತಿಸಿದ್ದು, ಹಣ ಪಡೆದು ಹೇಮಕ್ಕರವರು ಸದರಿ ದಾವೆಯನ್ನು ವಾಪಸ್ಸು ಪಡೆದಿರುತ್ತಾರೆ ಎಂದರೆ ಸರಿ. ಸದರಿ ರಾಜೀಯ ಪ್ರಕಾರ ಹೇಮಕ್ಕರವರು

ದಾವಾ ಸ್ವತ್ತು ಮುನೇಗೌಡರ ಕುಟುಂಬಕ್ಕೆ ಸೇರಿರುತ್ತದೆ ಎಂದು ಒಪ್ಪಿ ದಾವೆ ವಾಪಸ್ಸು ಪಡೆದಿರುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ನಿಡಿ-8 ಮತ್ತು 9 ರಂತೆ 10 ನೇ ಪ್ರತಿವಾದಿಗೆ ದಾಖಲೆಯನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ನನ್ನ ಅಣ್ಣನ ಮಕ್ಕಳೂ ಸಹ ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಿಡಿ-8 ಮತ್ತು 9 ಕ್ಕೆ ನಾನು ಪ್ರತಿ ಪುಟಕ್ಕೂ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಜಿ.ಪಿ.ಎ ಬಗ್ಗೆ ಬೆಂಗಳೂರಿನ ನೋಟರಿ ವಕೀಲರ ಬಳಿ ಹೋಗಿ ಸಹಿ ಮಾಡಿ ಅವರ ಮುಖಾಂತರ ನೋಟರಿ ಮಾಡಿಸಿಕೊಟ್ಟಿರುತ್ತೇವೆ ಎಂದರೆ ಸರಿ. ನಿಡಿ-9 ರ ಪ್ರಕಾರ 10 ನೇ ಪ್ರತಿವಾದಿ ನನಗೆ ಹಾಗೂ ನಮ್ಮ ಅಣ್ಣನಿಗೆ ತಲಾ ರೂ.1 ಲಕ್ಷ ಚೆಕ್ ಮುಖಾಂತರ ಹಾಗೂ ಉಳಿದ ರೂ.1 ಲಕ್ಷವನ್ನು ನಗದು ಮುಖಾಂತರ ಪಾವತಿಸಿರುತ್ತಾರೆ ಎಂದರೆ ಸರಿ. ಸದರಿ ಎರಡು ಚೆಕ್ ಗಳ ಹಣ ನಮ್ಮ ಖಾತೆಗೆ ಜಮಾ ಆಗಿರುತ್ತದೆ. ನಮಗೆ ಬರಬೇಕಾದ ಹಣ ಸಂಪೂರ್ಣವಾಗಿ ಪಾವತಿಯಾಗಿರುವುದರಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಅದೇ ದಿನ 10 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿ. ನಿಡಿ-8 ರ ಪ್ರಕಾರ 10 ನೇ ಪ್ರತಿವಾದಿಗೆ ಎಲ್ಲಾ ರೀತಿಯ ಅಧಿಕಾರವನ್ನು ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿ. ದಿನಾಂಕಃ 02-01-2006 ರಂದು ಜಿ.ಪಿ.ಎ ಪ್ರಕಾರ 10 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನ ಪಡೆದಿರುತ್ತಾರೆ ಎಂದರೆ ಸರಿ. ದಿನಾಂಕಃ 09-01-2006 ರಂದು 10 ನೇ ಪ್ರತಿವಾದಿಯು ದಾವಾ ಸ್ವತ್ತನ್ನು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ 11 ನೇ ಪ್ರತಿವಾದಿ ಲೇಔಟ್ ಮಾಡಲು ದಾವಾ ಸ್ವತ್ತಿಗೆ ಬಂದಾಗ ಗೊತ್ತಾಯಿತು. 11 ನೇ ಪ್ರತಿವಾದಿಯು ಫೆಬ್ರವರಿ 2006 ರಲ್ಲಿ ದಾವಾ ಸ್ವತ್ತಿನಲ್ಲಿ ಲೇಔಟ್ ಕೆಲಸ ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದ ಆಧಾರದಂತೆ ಪಹಣಿ ಪತ್ರಿಕೆ 11 ನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಲೇಔಟ್ ಮಾಡುವಾಗ ನಮಗೆ ಇನ್ನೂ ಹಣ ಬರಬೇಕು ಎಂದು ನಾವು 11 ನೇ ಪ್ರತಿವಾದಿ ವಿರುದ್ಧ ಗಲಾಟೆ ಮಾಡಿರುತ್ತೇವೆ ಎಂದರೆ ಸರಿ. 11 ನೇ ಪ್ರತಿವಾದಿ ತಾನು ಯಾವುದೇ ಹಣ ನೀಡಬೇಕಾಗಿಲ್ಲ ಪೂರ್ತಿ ಹಣ ನಿಮಗೆ ಬಂದಿರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ನಾರಾಯಣಸ್ವಾಮಿ ಎಂಬ ವ್ಯಕ್ತಿ ಮಧ್ಯ ಪ್ರವೇಶಿಸಿ ರೂ.2 ಲಕ್ಷ ಹೆಚ್ಚುವರಿ ಹಣವನ್ನು 11 ನೇ ಪ್ರತಿವಾದಿಯಿಂದ ಕೊಡಿಸುತ್ತೇನೆ ಎಂದು ಹೇಳಿ ತೀರ್ಮಾನ ಮಾಡಿರುತ್ತಾರೆ. ನಾರಾಯಣಸ್ವಾಮಿಯವರು ತೀರ್ಮಾನ ಮಾಡಿದಂತೆ ರೂ.2 ಲಕ್ಷ ಹಣ ನಮಗೆ ಪಾವತಿಯಾಗಿರುತ್ತದೆ. 10 ಅಥವಾ 11 ನೇ ಪ್ರತಿವಾದಿಗಳು ನನಗೆ ಖುದ್ದಾಗಿ ಹಣ ನೀಡಿರುವುದಿಲ್ಲ. 11 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ

ನಾರಾಯಣಸ್ವಾಮಿ ಮತ್ತು ಈ ದಾವೆಯ ವಾದಿ ನನ್ನ ಮುಖಾಂತರ ಏಪ್ರಿಲ್ 2006 ರಲ್ಲಿ ಕ್ರಯಪತ್ರ ಮಾಡಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ರಾಜೀ ಮಾಡಿಸುತ್ತೇವೆ ಎಂದು ಕರೆದುಕೊಂಡು ಹೋದರು ಎಂದು ನುಡಿಯುತ್ತೇನೆ. 10 ಮತ್ತು 11 ನೇ ಪ್ರತಿವಾದಿಗಳ ಜೊತೆ ರಾಜೀ ಮಾಡಿಸುತ್ತೇನೆ ಎಂದು ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ 10 ಅಥವಾ 11 ನೇ ಪ್ರತಿವಾದಿಗಳು ಇರಲಿಲ್ಲ. ನಾನು ಆ ಬಗ್ಗೆ ವಿಚಾರಿಸಿದಾಗ ಅವರು ಬರುತ್ತಾರೆ ನಿಮ್ಮ ಪಾಡಿಗೆ ನೀವು ಸಹಿ ಮಾಡಿ ಹೊರಟು ಹೋಗಿ ಎಂದು ನಾರಾಯಣಸ್ವಾಮಿ ಹೇಳಿರುತ್ತಾರೆ. ದಿನಾಂಕಃ 10-04-2006 ರಂದು ನಿಪಿ-11 ಕ್ಕಿಂತ ಮುಂಚೆ ನಾನು ನಾರಾಯಣಸ್ವಾಮಿಯವರಿಗೆ ಯಾವುದೇ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ. ನಾನು ನಾರಾಯಣಸ್ವಾಮಿಯವರಿಂದ ಯಾವತ್ತೂ ಸಹ ದೊಡ್ಡ ಮೊತ್ತದ ಹಣ ಪಡೆದುಕೊಂಡಿರುವುದಿಲ್ಲ. ನಿಪಿ-11 ರಲ್್ಲಿ ನಮೂದಿಸಿರುವಂತೆ ವಾದಿಯಾಗಲೀ, ನಾರಾಯಣಸ್ವಾಮಿಯಾಗಲೀ ನನಗೆ ರೂ.20,10,000/- ಗಳನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಕೇವಲ ರೂ.2 ಲಕ್ಷ ಮಾತ್ರ ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-11 ನ್ನು ಮಾಡಿಸಿಕೊಳ್ಳುವ ಸಮಯದಲ್ಲಿ 11 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಮತ್ತು ಲೇಔಟ್ ಕೆಲಸ ಮಾಡುತ್ತಿದ್ದರು. ಸದರಿ ವಿಚಾರ ನನಗೆ, ವಾದಿಗೆ ಹಾಗೂ ನಾರಾಯಣಸ್ವಾಮಿಗೆ ಗೊತ್ತಿತ್ತು ಎಂದರೆ ಸರಿ. 11 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು, ವಾದಿ ಹಾಗೂ ನಾರಾಯಣಸ್ವಾಮಿ ಸೇರಿಕೊಂಡು ನಿಪಿ-11 ಕ್ರಯಪತ್ರವನ್ನು ವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತೇವೆ ಎಂದರೆ ರಾಜೀ ಮಾಡಿಸುತ್ತೇವೆ ಎಂದು ಕರೆದುಕೊಂಡು ಹೋಗಿ ಸಹಿ ಮಾಡಿಸಿರುತ್ತಾರೆ. 10 ನೇ ಪ್ರತಿವಾದಿ 11 ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಾಗಿನಿಂದ ದಾವಾ ಸ್ವತ್ತಿನ ಕಂದಾಯ ದಾಖಲೆಗಳು 11 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿ. ಅದೇ ರೀತಿ 11 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ನಿಡಿ-8 ರ ಪ್ರಕಾರ ಜಿ.ಪಿ.ಎ ಬರೆದುಕೊಟ್ಟಾಗ ಎಲ್ಲಾ ಮೂಲ ದಾಖಲೆಗಳನ್ನು 10 ನೇ ಪ್ರತಿವಾದಿಗೆ ನೀಡಿರುತ್ತೇನೆ ಎಂದರೆ ಸರಿ. 11 ನೇ ಪ್ರತಿವಾದಿ ನಮ್ಮ ಕುಟುಂಬದವರಿಂದ ಒಂದು ಒಪ್ಪಿಗೆ ಪತ್ರ ಬರೆಸಿಕೊಂಡಿದ್ದಾರೆ ಎಂದರೆ ಆ ಬಗ್ಗೆ ನಮ್ಮ ಕುಟುಂಬದ ಸದಸ್ಯರು ಬಂದು ಹೇಳಿದಾಗ ನನಗೆ ಗೊತ್ತಾಯಿತು. ಸದರಿ ಒಪ್ಪಿಗೆ ಪತ್ರ ಸಹ ನೋಂದಣಿಯಾಗಿರುತ್ತದೆ ಎಂದರೆ ಸರಿ. 11 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ವಾದಿ ಸೇರಿಕೊಂಡು ಈ ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಾರಾಯಣಸ್ವಾಮಿಯವರು ವಕೀಲರನ್ನು ನೇಮಿಸಿ ನಡೆಸುತ್ತಿದ್ದರು ಎಂದರೆ ಸರಿ.

ನಾರಾಯಣಸ್ವಾಮಿ ಮತ್ತು ವಾದಿ ಹೇಳಿದಂತೆ ನಾನು ಸಹಿ ಮಾಡಿ ಬಂದಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾರಾಯಣಸ್ವಾಮಿ ಮತ್ತು ವಾದಿ ಮಾಹಿತಿ ನೀಡಿರುತ್ತಾರೆ. ಆ ಸಮಯದಲ್ಲಿ ನನ್ನ ಬಳಿ ಮಾಹಿತಿ ಕೇಳಿರುವುದಿಲ್ಲ. ನಾರಾಯಣಸ್ವಾಮಿ ಮತ್ತು ವಾದಿ ಜೊತೆ ಸೇರಿಕೊಂಡು ನಾವು ಈ ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :-** ವಾದಿಗಳು ಮತ್ತು ಅವರ ಪರ ವಕೀಲರು ಗೈರುಹಾಜರಾಗಿದ್ದು, ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**